# National
# Kannada
# 12.02.2026 7.35 pm
# ಆಕಾಶವಾಣಿ, ಬೆಂಗಳೂರು

## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸಶಸ್ತ್ರ ಪಡೆಯ ಸಾಮರ್ಥ್ಯ ಹೆಚ್ಚಿಸುವ 3.60 ಲಕ್ಷ ಕೋಟಿ ಪ್ರಸ್ತಾವಕ್ಕೆ ರಕ್ಷಣಾ ಸಲಕರಣೆ ಖರೀದಿ ಮಂಡಳಿ ಅನುಮೋದನೆ
2. ಔದ್ಯಮಿಕ ಸಂಬಂಧ ಸಂಹಿತೆ ತಿದ್ದಪಡಿ ವಿಧೇಯಕ 2026ಕ್ಕೆ ಲೋಕಸಭೆ ಇಂದು ಅಂಗೀಕಾರ
3. ತಮಿಳುನಾಡಿನ ಕೂಡಂಕುಲಂ ಅಣುಶಕ್ತಿ ಸ್ಥಾವರದ ಮೂರನೇ ಘಟಕ ಈ ವರ್ಷಾಂತ್ಯದ ವೇಳೆಗೆ ಪೂರ್ತಿ – ಸಚಿವ ಡಾ.ಜಿತೇಂದ್ರ ಸಿಂಗ್
4. ಮೂರನೇ ತರಗತಿಯಿಂದಲೇ ಕೃತಕಬುದ್ಧಿಮತ್ತೆ ಶಿಕ್ಷಣ ಆರಂಭ – ಸಚಿವ ಧರ್ಮೇಂದ್ರ ಪ್ರಧಾನ್
5. ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್; ಇಂದಿನ ಮೊದಲೆರೆಡು ಪಂದ್ಯದಲ್ಲಿ ಶ್ರೀಲಂಕಾ, ಇಟಲಿಗೆ ಜಯ; ಮೂರನೇ ಪಂದ್ಯದಲ್ಲಿ ನಮಿಬಿಯಾ ವಿರುದ್ಧ ಬ್ಯಾಟಿಂಗ್ ಆರಂಭಿಸಿದ ಭಾರತ

***************

ದೇಶದ ಸಶಸ್ತ್ರ ಪಡೆಯ ಸಾಮರ್ಥ್ಯವನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ 3.60 ಲಕ್ಷ ಕೋಟಿ ಪ್ರಸ್ತಾಪಗಳಿಗೆ ರಕ್ಷಣಾ ಸಲಕರಣೆ ಖರೀದಿ ಮಂಡಳಿ ಅನುಮೋದನೆ ನೀಡಿದೆ.

ಭಾರತೀಯ ವಾಯುಪಡೆಗಾಗಿ, ಮಲ್ಟಿರೋಲ್ ಫೈಟರ್ ಏರ್‌ಕ್ರಾಫ್ಟ್ ರಫೆಲ್, ಯುದ್ಧ ಕ್ಷಿಪಣಿ ಮತ್ತು ಏರ್‌ಶಿಪ್ ಸೆಟಲೈಟ್ಸ್ ಖರೀದಿಸಲು ಅಗತ್ಯ ಸಮ್ಮತಿ ನೀಡಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ರಫೆಲ್‌ಗೆ ಸಂಬಂಧಿಸಿದಂತೆ ಭಾರತದಲ್ಲೇ ತಯಾರಾದ ಹೆಚ್ಚಿನ ಪ್ರಮಾಣದ ಏರ್‌ಕ್ರಾಫ್ಟ್‌ಗಳನ್ನು ಖರೀದಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

***************

ಲೋಕಸಭೆ, ಔದ್ಯಮಿಕ ಸಂಬಂಧ ಸಂಹಿತೆ ತಿದ್ದುಪಡಿ ವಿಧೇಯಕ 2026 ಅನ್ನು ಅಂಗೀಕರಿಸಿದೆ. 2020ರ ಔದ್ಯಮಿಕ ಸಂಬಂಧ ಸಂಹಿತೆಗೆ ತಿದ್ದುಪಡಿ ತರುವುದು ಇದರ ಉದ್ದೇಶವಾಗಿದೆ.

ಈ ಬಗ್ಗೆ ವಿಧೇಯಕ ಕುರಿತ ಚರ್ಚೆಗೆ ಉತ್ತರ ನೀಡಿದ ಕಾರ್ಮಿಕ ಹಾಗೂ ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ, ಕಾರ್ಮಿಕ ಸಂಹಿತೆಯನ್ನು ಕೆಲಸಗಾರರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಪರಿಚಯಿಸಲಾಗಿದೆ. 17 ರಾಷ್ಟ್ರೀಯ ಕಾರ್ಮಿಕ ಸಂಘಟನೆ ತಿಳಿಸಿವೆ. ಕೆಲವೇ ಕೆಲವು ಸಂಘಟನೆಗಳು ವಿಧೇಯಕದ ಬಗ್ಗೆ ವಿರೋಧ ವ್ಯಕ್ತಪಡಿಸಿದೆ ಎಂದರು.

ಕಾರ್ಮಿಕ ಸಂಹಿತೆಯು ಶಾಸನಬದ್ಧ ಸಮತಟ್ಟಾದ ವೇತನಕ್ಕೆ ಅವಕಾಶ ಕಲ್ಪಿಸುತ್ತದೆ. ಮಹಿಳಾ ಮತ್ತು ಪುರುಷ ಕಾರ್ಮಿಕರಿಗೆ ಸಮಾನ ವೇತನ ಹಾಗೂ ಸಕಾಲದಲ್ಲಿ ವೇತನ ಪಾವತಿ ಖಾತರಿಪಡಿಸುತ್ತದೆ. 40 ವರ್ಷಕ್ಕೆ ಮೇಲ್ಪಟ್ಟ ಕಾರ್ಮಿಕರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಇದಕ್ಕೂ ಮುನ್ನ ನಡೆದ ಚರ್ಚೆಯಲ್ಲಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ವಿಧೇಯಕದ ಮೇಲಿನ ಚರ್ಚೆ ಆರಂಭಿಸಿದ ಕಾಂಗ್ರೆಸ್ ಕೋಡಿ ಕುನ್ನಿಲ್ ಸುರೇಶ್ 2026ರ ಔದ್ಯಮಿಕ ಸಂಬಂಧ ಸಂಹಿತೆ ತಿದ್ದುಪಡಿ ವಿಧೇಯಕ, ಸುಧಾರಣಾ ಉಪಕ್ರಮವಲ್ಲ ಎಂದು ಟೀಕಿಸಿದರು. ನಿರುದ್ಯೋಗ ದರ ಯುವಕರಲ್ಲಿ ಹೆಚ್ಚಾಗಿದ್ದು, ಉದ್ಯೋಗ ಸಂರಕ್ಷಣೆ ಅವಕಾಶಗಳನ್ನು ಬಲಪಡಿಸುವ ಬದಲು ಸರ್ಕಾರ ಅದನ್ನು ಬಲಹೀನಗೊಳಿಸುತ್ತಿದೆ ಎಂದರು.

ಬಿಜೆಪಿಯ ದರ್ಶನ್ ಸಿಂಗ್ ಚೌಧರಿ, ತಿದ್ದುಪಡಿ ವಿಧೇಯಕ ದೇಶದ ಕಾರ್ಮಿಕರ ಹಿತಾಸಕ್ತಿ ಕಾಪಾಡಲಿದೆ. ಉದ್ದಿಮೆಗಳಿಗೆ ಸುಲಭ ವ್ಯಾಪಾರಕ್ಕೆ ಅನುವು ಮಾಡಿಕೊಡಲಿದೆ ಎಂದರು.

ಸಮಾಜವಾದಿ ಪಕ್ಷದ ಅಫ್ಜಲ್ ಅನ್ಸಾರಿ, ಸರ್ಕಾರ ಕಾರ್ಮಿಕರ ಹಿತಾಸಕ್ತಿಯನ್ನು ಬದಿಗೊತ್ತಿದೆ ಎಂದು ದೂರಿದರು.

ಎನ್‌ಸಿಪಿ–ಎಸ್‌ಸಿಪಿ ಸುಪ್ರೀಯ ಸುಳೆ, ಗುತ್ತಿಗೆ ಕಾರ್ಮಿಕರು ಹೊಸ ತಿದ್ದುಪಡಿ ಕಾಯ್ದೆಗೆ ಒಳಪಡುವ ಬಗ್ಗೆ ಪ್ರಶ್ನಿಸಿದರು.

ಸಿಪಿಐಎಂಎಲ್‌ನ ಸುಧಾಮ್ ಪ್ರಸಾದ್ ವಿಧೇಯಕ ವಿರೋಧಿಸಿ ಮಾತನಾಡಿ, ಹೊಸ ಸಂಹಿತೆಯನ್ನು ಕೆಲವು ಬಂಡವಾಳಶಾಹಿಗಳ ಲಾಭಕ್ಕಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಆಪಾದಿಸಿದರು.

ಐಯುಎಂಎಲ್‌ನ ಇ ಟಿ ಮೊಹಮ್ಮದ್ ಬಷೀರ್, ವಿಧೇಯಕ ಕಾರ್ಮಿಕರ ಹಕ್ಕುಗಳನ್ನು ಬಲಿಕೊಟ್ಟಿದೆ ಎಂದು ಆರೋಪಿಸಿದರು.

***************

ರಾಜ್ಯಸಭೆ 2026–27ನೇ ಸಾಲಿನ ಬಜೆಟ್ ಮೇಲಿನ ಚರ್ಚೆಯನ್ನು ಮುಂದುವರೆಸಿತು. ಚರ್ಚೆಯಲ್ಲಿ ಪಾಲ್ಗೊಂಡ ಬಿಜೆಪಿ ಸದಸ್ಯ ಮದನ್ ರಾಥೋಡ್, ಭಾರತ ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಮೊಬೈಲ್ ತಯಾರಿಕಾ ಕ್ಷೇತ್ರದಲ್ಲಿ ವಿಶ್ವದ ಎರಡನೇ ಅತಿ ದೊಡ್ಡ ಉತ್ಪಾದಕ ದೇಶವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಒಂದು ಸಂದರ್ಭದಲ್ಲಿ ಕೇವಲ ಎರಡು ಮೊಬೈಲ್ ತಯಾರಿಕಾ ಘಟಕಗಳನ್ನು ಹೊಂದಿದ್ದ ಭಾರತ, ಇದೀಗ ಮೊಬೈಲ್‌ಗಳನ್ನು ರಫ್ತು ಮಾಡುವ ಸ್ಥಿತಿಯಲ್ಲಿದೆ ಎಂದರು.

ಮೊದಲು ಸುಮಾರು 18 ಸಾವಿರ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಇರಲಿಲ್ಲ. ನರೇಂದ್ರ ಮೋದಿ ಸರ್ಕಾರ ಎಲ್ಲ ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ ಖಾತರಿಪಡಿಸಿದೆ ಎಂದು ರಾಥೋಡ್ ಹೇಳಿದರು.

ಕಾಂಗ್ರೆಸ್‌ನ ಜಿ.ಸಿ.ಚಂದ್ರಶೇಖರ್ ಮಾತನಾಡಿ, ಬಜೆಟ್ ಜನರ ನಿರೀಕ್ಷೆಯಂತಿಲ್ಲ ಎಂದು ಟೀಕಿಸಿದರು. ಬಜೆಟ್‌ನಲ್ಲಿ ಒಟ್ಟಾರೆ 53.4 ಲಕ್ಷ ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದರೂ, ಪ್ರಮುಖ ಕಾರ್ಯಕ್ರಮಗಳಿಗೆ ಶೇಕಡ 30ರಷ್ಟು ಕೂಡ ಹಣ ಒದಗಿಸಿಲ್ಲ ಎಂದು ಆರೋಪಿಸಿದರು.

ಬಿಜೆಪಿ ಶಂಭು ಶರಣ್ ಪಟೇಲ್ ಬಜೆಟ್ ಸ್ವಾಗತಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ದೂರದೃಷ್ಟಿಯಿಂದಾಗಿ ದೇಶ, ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿದೆ. ಮೂರನೇ ಸ್ಥಾನಕ್ಕೂ ಏರಲಿದೆ ಎಂದು ಅವರು ಹೇಳಿದರು.

ಸಿಪಿಐನ ಸಂತೋಷ್ ಕುಮಾರ್, ಬಜೆಟ್‌ನಲ್ಲಿ ಕೇರಳವನ್ನು ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿದರು. ವಿವರವಾದ ಅಂಶಗಳೊಂದಿಗೆ ಸೂಕ್ತವಾದ ಬೇಡಿಕೆಗಳನ್ನು ಮುಂದಿಟ್ಟರೂ ಕೂಡ ಯಾವುದನ್ನು ಸ್ವೀಕರಿಸಲಾಗಿಲ್ಲ ಎಂದು ದೂರಿದರು.

ಶಿವಸೇನೆ ಯುಬಿಟಿಯ ಪ್ರಿಯಾಂಕ ಚತುರ್ವೇದಿ, ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಹಿಂತೆಗೆದುಕೊಳ್ಳಲಾಗಿದ್ದ ಹಿರಿಯ ನಾಗರಿಕರ ರೈಲ್ವೆ ಪ್ರಯಾಣದ ದರ ರಿಯಾಯಿತಿಯನ್ನು ಪುನಃ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

***************

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ನೀಡಿದ ಉತ್ತರದಲ್ಲಿ ದೇಶದ ಆರ್ಥಿಕ ರೂಪಾಂತರಕ್ಕೆ ಬಜೆಟ್ ಹೇಗೆ ಕೊಡುಗೆ ನೀಡಬಲ್ಲದು ಎಂಬುದರ ಸಮಗ್ರ ಚಿತ್ರಣ ನೀಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಹಣಕಾಸು ಸಚಿವರ ನೀಡಿದ ಉತ್ತರದ ವೀಡಿಯೊವನ್ನು ಹಂಚಿಕೊಂಡಿರುವ ಪ್ರಧಾನಿ ಅವರು, ತ್ವರಿತ ಸುಧಾರಣೆ, ಎಂಎಸ್‌ಎಂಇಗಳಿಗೆ ಬೆಂಬಲ ಮುಂದಿನ ತಲೆಮಾರಿನ ಮೂಲಸೌಕರ್ಯ, ಶಿಕ್ಷಣ ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ಕೇಂದ್ರೀಕೃತವಾದ ಒತ್ತು ನೀಡಿದ್ದಾರೆ ಎಂದು ತಿಳಿಸಿದ್ದಾರೆ.

***************

ತಮಿಳುನಾಡಿನ ಕೂಡಂಕುಲಂ ಅಣುಶಕ್ತಿ ಸ್ಥಾವರವನ್ನು ನಿಗದಿತ ಅವಧಿಯಲ್ಲಿ ಪೂರ್ತಿಗೊಳಿಸಲಾಗುವುದು ಎಂದು ಪ್ರಧಾನಮಂತ್ರಿ ಕಚೇರಿ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಅವರು, ಮೂಲತಃ ವಾಜಪೇಯಿ ಸರ್ಕಾರದ ಸಂದರ್ಭದಲ್ಲಿ ಕೂಡಂಕುಲಂ ಯೋಜನೆಯನ್ನು ಪ್ರಕಟಿಸಲಾಗಿದ್ದರೂ, ಅರ್ಧಶತಮಾನದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಯಿತು. ಈಗ ಪ್ರಧಾನಿ ನರೇಂದ್ರ ಮೋದಿ ಅವರ ಅಚಲ ಬದ್ಧತೆಯ ಕಾರಣದಿಂದಾಗಿ ಯೋಜನೆ ಪ್ರಗತಿಯಲ್ಲಿದೆ. ಮೂರನೇ ಘಟಕದ ಕಾಮಗಾರಿ ಈ ವರ್ಷದೊಳಗೆ ಪೂರ್ತಿಗೊಳ್ಳುವ ನಿರೀಕ್ಷೆ ಇದೆ ಹಾಗೂ ನಾಲ್ಕನೇ ಘಟಕ ಮುಂದಿನ ವರ್ಷದೊಳಗೆ ಪೂರ್ತಿಗೊಳ್ಳಲಿದೆ ಎಂದು ಹೇಳಿದರು.

ಯಾವುದೇ ಭೌಗೋಳಿಕ– ರಾಜಕೀಯ ವಿದ್ಯಮಾನಗಳು ಸ್ಥಾವರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಸದನದಲ್ಲಿ ಭರವಸೆ ನೀಡಿದರು.

ರಾಜಸ್ಥಾನ್ ಅಣುಶಕ್ತಿ ಯೋಜನೆಯು ತನ್ನ ಸಾಮರ್ಥ್ಯವಾದ 700 ಕಿಲೋವ್ಯಾಟ್ಸ್ ಉತ್ಪಾದನೆಯನ್ನು ಸಾಧಿಸಿದೆ ಎಂದು ರಾಜ್ಯಸಭೆಗೆ ತಿಳಿಸಿದ ಸಚಿವ ಡಾ.ಜಿತೇಂದ್ರ ಸಿಂಗ್, ಭಾರತದ ಅಣುಶಕ್ತಿ ಯೋಜನೆ ವಿಸ್ತರಣೆಯ ಪ್ರವೃತ್ತಿಯಲ್ಲಿದೆ ಎಂದರು.

***************

ಕೇಂದ್ರ ಸರ್ಕಾರ ಶಿಕ್ಷಣ ವಲಯದಲ್ಲಿ ಕೃತಕಬುದ್ಧಿಮತ್ತೆ ಏಕೀಕರಣವನ್ನು ಸಕ್ರಿಯವಾಗಿ ಬಲಗೊಳಿಸುತ್ತಿದೆ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಅವರು ಭಾರತ್ ಬೋಧನ್ ಎಐ ಕಾನ್‌ಕ್ಲೇವ್ 2026 ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತದ ಶಿಕ್ಷಣ ಪರಿಸರದಲ್ಲಿ ಕೃತಕಬುದ್ಧಿಮತ್ತೆ ಕಾರ್ಯ ತೀವ್ರಗತಿಯಲ್ಲಿ ಮುಂದುವರೆಯುತ್ತಿದೆ. ದೇಶದಲ್ಲಿ ಬಲವಾದ ಪ್ರತಿಭಾ ಗುಚ್ಛವೇ ಇದೆ ಎಂದು ಹೇಳಿದರು.

ಕೃತಕಬುದ್ಧಿಮತ್ತೆಯನ್ನು ಮೂರನೇ ತರಗತಿಯಿಂದ ಮುಂದುವರೆದ ಸಂಶೋಧನಾ ಮಟ್ಟದವರೆಗೂ ಸೇರ್ಪಡೆಗೊಳಿಸಲಾಗುವುದು; ಅಧ್ಯಯನ ವಿಷಯವಾಗಿ ಮಾತ್ರವಲ್ಲದೇ ಸಂಶೋಧನಾ ವಿಷಯ ನಾವೀನ್ಯತಾ ಮಾದರಿ ಹಾಗೂ ಸಂಪರ್ಕ ಕಾರ್ಯತಂತ್ರವಾಗಿ ಸೇರ್ಪಡೆಗೊಳಿಸಲಾಗುವುದು ಎಂದು ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

***************

ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲೂಲಾ ಡಾ ಸಿಲ್ವಾ ಅಧಿಕೃತ ಭೇಟಿಗಾಗಿ ಭಾರತಕ್ಕೆ ಇದೇ 18 ರಂದು ಆಗಮಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಇಂಡಿಯಾ ಎಐ ಇಂಪ್ಯಾಕ್ಟ್ ಸಮೀಟ್‌ನಲ್ಲಿ ಪಾಲ್ಗೊಳ್ಳಲು ಬ್ರೆಜಿಲ್ ಅಧ್ಯಕ್ಷರು ಆಗಮಿಸುತ್ತಿದ್ದಾರೆ.

ವಿದೇಶಾಂಗ ವ್ಯವಹಾರ ವಕ್ತಾರ ರಣಧೀರ್ ಜೈಸ್ವಾಲ್ ನವದೆಹಲಿಯಲ್ಲಿಂದು ಸುದ್ದಿಗಾರರಿಗೆ ತಿಳಿಸಿ, ಬ್ರೆಜಿಲ್ ಅಧ್ಯಕ್ಷರು ಸಚಿವರು ಹಾಗೂ ವ್ಯಾಪಾರ ನಿಯೋಗದೊಂದಿಗೆ ವ್ಯಾಪಾರಕ್ಕೆ ಬರಲಿದ್ದು, ಇದೇ 21 ರಂದು ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

***************

ಭಾರತ–ಅಮೆರಿಕಾ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಇಂಜಿನಿಯರಿಂಗ್ ವಲಯ ಶ್ಲಾಘಿಸಿದೆ. ಭಾರತದ ಇಂಜಿನಿಯರಿಂಗ್ ರಫ್ತು ವರ್ಧನೆ ಮಂಡಳಿಯ ಮಾಜಿ ಅಧ್ಯಕ್ಷ ಅರುಣ್ ಕುಮಾರ್ ಗರೋಡಿಯಾ ಆಕಾಶವಾಣಿ ಸುದ್ದಿಯೊಂದಿಗೆ ಮಾತನಾಡಿ, ಅನೇಕ ಜಾಗತಿಕ ಸವಾಲುಗಳ ನಡುವೆಯೂ ಭಾರತದ ಇಂಜಿನಿಯರಿಂಗ್ ಮತ್ತು ಸಮಸ್ಥಿತಿ ಕಾಪಾಡುಕೊಂಡು ಬಂದಿದೆ ಎಂದು ಹೇಳಿದರು.

**ಈ ಒಪ್ಪಂದ ಇಂಜಿನಿಯರಿಂಗ್ ರಫ್ತು ಪ್ರಮಾಣವನ್ನು ಭವಿಷ್ಯದಲ್ಲಿ ಗಮನಾರ್ಹವಾಗಿ ಹೆಚ್ಚಿಸಲಿದೆ ಎಂದು ಅವರು ಹೇಳಿದ್ದಾರೆ.**

*******************

**ರಕ್ಷಣಾ ಸಚಿವಾಲಯ 8 ಡಾರ್ನಿಯರ್–228 ಏರ್‌ಕ್ರಾಫ್ಟ್ ಪೂರೈಕೆಗಾಗಿ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್–ಎಚ್‌ಎಎಲ್ ಜೊತೆ ಸಹಿ ಹಾಕಿದೆ.**

**2 ಸಾವಿರದ 312 ಕೋಟಿ ರೂಪಾಯಿ ಮೌಲ್ಯದ ಈ ಒಪ್ಪಂದ ಭಾರತೀಯ ಕರಾವಳಿ ಕಾವಲು ಪಡೆಗಾಗಿ ಕಾರ್ಯನಿರ್ವಹಣಾ ಉಪಕರಣ ಪೂರೈಸುವ ಅಂಶವನ್ನು ಒಳಗೊಂಡಿದೆ. ಇದು ಆತ್ಮನಿರ್ಭರ ಭಾರತ ಹಾಗೂ ಮೇಕ್ ಇನ್ ಇಂಡಿಯಾ ಬಗ್ಗೆ ಸರ್ಕಾರಕ್ಕೆ ಇರುವ ಬದ್ಧತೆ ವ್ಯಕ್ತಪಡಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.**

*******************

**ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ನ ಇಂದಿನ ಮೊದಲೆರೆಡು ಪಂದ್ಯಗಳಲ್ಲಿ ಶ್ರೀಲಂಕಾ, ಇಟಲಿಗೆ ಜಯಗಳಿಸಿವೆ.**

**ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟಿ–20 ವಿಶ್ವಕಪ್ ಕ್ರಿಕೆಟ್‌ನ ಇಂದಿನ ಮೂರನೇ ಪಂದ್ಯದಲ್ಲಿ ಭಾರತ–ನಮೀಬಿಯಾ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ನಮೀಬಿಯಾ ತಂಡ ಬೌಲಿಂಗ್ ಆಯ್ಕೆ ಮಾಡಿಕೊಂಡಿದೆ.**

*********ಮುಕ್ತಾಯ**********